ಪುತ್ತೂರು ತಾಲ್ಲೂಕಿನಲ್ಲಿ ಇಂಡಸ್ಟ್ರೀಯಲ್ ಸೈಟು ಮಾಡುವ ಬಗ್ಗೆ.

೨೩೦೭. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪುತ್ತೂರು ತಾಲ್ಲೂಕಿನಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಮಾಡುವುದಕ್ಕಾಗಿ ಜಾಗವನ್ನು ಸ್ವಾಧೀನ ತೆಗೆದುಕೊಳ್ಳುವ ವಿಚಾರ ಸರ್ಕಾರದ ಮುಂದಿದೆಯೇ ?

ಆ) ಸದರಿ ಎಸ್ಟೇಟ್ ಸ್ಥಾಪನೆಗಾಗಿ ಸಾರ್ವಜನಿಕರು ಮನವಿ ಸಲ್ಲಿಸಿದಾಗ್ಯೂ ಅನುಮತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸದರಿ ಎಸ್ಟೇಟ್‌ನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇದೆ.

ಆ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ದಕ್ಷಿಣ ಕನ್ನಡ ಜಿಲ್ಲಾ, ಪುತ್ತೂರು ತಾಲ್ಲೂಕಿನಲ್ಲಿ ಕೆಮಿಂಜೆ ಗ್ರಾಮದಲ್ಲಿ ೨೧ ಎಕರೆ ೪೩ ಸೆಂಟ್ಸ್ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಕಾಯಿದೆ ೧೯೬೬ ಕಲಂ ೨೮ (೪)ರ ಅಂತಿಮ ಅಧಿಸೂಚನೆಯು ದಿನಾಂಕ ೧೫-೮-೧೯೮೫ರ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ. ಭೂ ಮಾಲೀಕರು ಅತಿ ಹೆಚ್ಚಿನ ಪರಿಹಾರಧನವನ್ನು ಕೇಳುತ್ತಿರುವುದರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ತಡವಾಗಿರುತ್ತದೆ. ಸದರಿ ಜಮೀನಿನ ಪರಿಹಾರಧನವನ್ನು ಈಗ ನಿಗಧಿಗೊಳಿಸಿದ್ದು ಸಧ್ಯದಲ್ಲೇ ಜಮೀನನ್ನು ಸ್ವಾಧೀನಪಡಿಸಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಪ್ರದಾನ ಮಾಡಲಾಗುವುದು.

ರೈತರುಗಳಿಗೆ ವಿದ್ಯುತ್ ನಿಲುಗಡೆ.

೨೩೨೯. ಶ್ರೀ ರಂಗದೇವರಾಯಲು (ಕನಕಗಿರಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ದಿನಕ್ಕೆ ೮ ತಾಸು ವಿದ್ಯುಚ್ಛಕ್ತಿ ನಿಲ್ಲಿಸಂತ್ತಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಬಗ್ಗೆ ರೈತರಿಗೆ ತೊಂದರೆಯಾಗದಂತ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಸರ್ಕಾರದವರು ಕೂಡಲೇ ಕ್ರಮಕೈಗೊಳ್ಳುವರೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ಹಾಲಿ ವಿದ್ಯುತ್ತಿನ ಅಧಿಕ ಕೊರತೆ ಪರಿಸ್ಥಿತಿಯಲ್ಲಿ ರಾಜ್ಯದ್ಯಾದಂತ ಗ್ರಾಮೀಣ ಪ್ರದೇಶಗಳಲ್ಲಿ ದಿನವಹಿ ಹಗಲಿನಲ್ಲಿ ೮ ಘಂಟೆಗಳ ಕಾಲ ವಿದ್ಯುತ್ ನಿಲುಗಡೆ ಮಾಡುವುದು ಅತಿ ಅವಶ್ಯಕವೂ, ಅನಿವಾರ್ಯವೂ ಆಗಿದೆ. ಈ ಪರಿಸ್ಥಿತಿಯಲ್ಲಿ ರೈತ ವರ್ಗದವರ ಸಹಕಾರ ಅಗತ್ಯ.

ಆ) ಗ್ರಾಮೀಣ ಪ್ರದೇಶಗಳಲ್ಲಿ ಹಗಲಿನಲ್ಲಿ ದಿನವಹಿ ೮ ಘಂಟೆಗಳ ವಿದ್ಯುತ್ ನಿಲುಗಡೆ ಅನಿವಾರ್ಯ ಈ ನಿಲುಗಡೆಯ ವೇಳೆಯನ್ನು (ಹಗಲಿನಲ್ಲಿ) ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ನಿಗದಿ ಮಾಡಬಹುದು. ಆದರೆ ನಿಲುಗಡೆ ೮ ಘಂಟೆಯ ಅವಧಿಯದ್ದಾಗಿರಲೇಬೇಕು.

ನೀರಾವರಿ ಪಂಪುಸೆಟ್ಟು ಗ್ರಾಹಕರಿಗೆ ವಿದ್ಯುತ್ ಬಳಕೆಯ ಮೇಲೆ ಕಡಿತ ವಿಧಿಸಿಲ್ಲ. ಆದ್ದರಿಂದ ಅವರು ವಿದ್ಯುತ್ತನ್ನು ಉಳಿದ ವೇಳೆ ಅವಶ್ಯಕವಿರುವಷ್ಟು ಉಪಯೋಗಿಸಬಹುದು.